ಗೆಳೆಯ: ಗಣಿತಕ್ಕಿಂತ ಕಠಿಣವಾದ ವಿಷಯ ಮತ್ತೊಂದಿಲ್ಲ.
ಇನ್ನೊಬ್ಬ ಗೆಳೆಯ: ತರ್ಕಶಾಸ್ತ್ರ ಗಣಿತಕ್ಕಿಂತ ಕಠಿಣ ಏಕೆ?
ಮತ್ತೊಬ್ಬ ಗೆಳೆಯ: ಚರಿತ್ರೆ ಇನ್ನೂ ಕಷ್ಟ. ಗೊತ್ತೆ?
ಗುಂಡ: ಜಗತ್ತಿನಲ್ಲಿ ಇದಕ್ಕಿಂತ ಕಠಿಣವಾದ ವಿಷಯ ಬೇರೆ ಇಲ್ಲ ಎನ್ನುತ್ತಾರೆ.
ಗೆಳೆಯ: ಯಾವುದು ಅದು?
ಗುಂಡ: ಮಹಿಳೆ.

★★★



ನರ್ಸಿಂಗ್ ಹೋಂಗೆ ದಾಖಲಾಗಿದ್ದ ಪ್ರೇಯಸಿಯನ್ನು ನೋಡಲು ಹೊರಟಿದ್ದ ಗುಂಡನಿಗೆ.

ಗೆಳೆಯ: 'ಎಲ್ರೂ ಸೇಬು, ಮೋಸಂಬಿ ಕೊಟ್ಟಿರ್ತಾರೆ. ನೀನು ಏನಾದ್ರೂ ಡಿಫರೆಂಟಾಗಿ ತಗೊಂಡ್ಹೋಗು.

ನರ್ಸಿಂಗ್ ಹೋಂನಿಂದ ವಾಪಸಾದ ಗುಂಡನ ಕಪಾಳ ಕೆಂಪಗಾಗಿತ್ತು.

ಕಾರಣ: ಹಲಸಿನ ಹಣ್ಣು ಒಯ್ದಿದ್ದ!

(ಸಂಗ್ರಹ) ಹಾಡ್ಯ ಬಿ. ಜಯಾನಂದ




ಬೇಗನೆ ಶಾಲೆಬಿಟ್ಟು ಹೊರಟ ಶಿಕ್ಷಕರಿಗೆ ಕೇಳಿದರು. ಮೇಷ್ಟ್ರೆ ಇವತ್ತೇನು ಶಾಲೆಯನ್ನು ಬೇಗ ಬಿಟ್ರಾ?
ಶಿಕ್ಷಕ: ಹೌದು. ಏಕೆಂದರೆ ಶಾಲೆಗೆ ಬರುವಾಗ ಸ್ವಲ್ಪ ಲೇಟಾಗಿತ್ತು.

★★★

ಭಿಕ್ಷುಕ-1: ಈ ರಾಜ್ಯದ ರಾಜಕುಮಾರಿಗೂ ನನ್ನ ಮಗನಿಗೂ ಮದುವೆ ಅರ್ಧ ಆದ ಹಾಗೆ.
ಭಿಕ್ಷುಕ-2: ಆಂ! ಹೌದೆ, ಅದು ಹೇಗೆ?
ಭಿಕ್ಷುಕ-1: ನಮ್ಮ ಕಡೆಯವರು ಒಪ್ಪಿಯಾಗಿದೆ. ಅವರ ಕಡೆಯ ಒಪ್ಪಿಗೆಗೆ ಕಾಯ್ತಾ ಇದ್ದೇವೆ ಅಷ್ಟೆ.

(ಸಂಗ್ರಹ) ಎಸ್.ಎ. ಭಟ್

ಗಂಡ– ಹೆಂಡತಿಯ ನಡುವೆ ಯಾವುದೋ ವಿಷಯಕ್ಕೆ ಜಗಳ ಪ್ರಾರಂಭವಾಯಿತು. ಹೆಂಡತಿ ಅಳುಮೋರೆ ಮಾಡಿಕೊಂಡು ಹೇಳಿದಳು. 'ಮದುವೆಯಾದ ಮೇಲೆ ನನಗೆ ಜಗತ್ತಿನ ಸಂತೋಷವೆಲ್ಲಾ ಸಿಗುತ್ತೆ ಅಂತ ನಾನು ಆಸೆ ಪಟ್ಟಿದ್ದೆ.'
'ನನ್ನಂಥ ಮನುಷ್ಯನಿಂದ ಏನು ಸಾಧ್ಯ? ಎಲ್ಲಾ ಮೇಲಿನವನ ಕೈಯಲ್ಲಿದೆ' ಗಂಡ ದುಃಖ ವ್ಯಕ್ತಪಡಿಸಿದ.
'ಅವನ ಕೈಯಲ್ಲಿ ಏನಿದೆ? ಮೇಲಿನ ಮನೆಯವನು ಕಳೆದ ತಿಂಗಳೇ ಮನೆ ಖಾಲಿ ಮಾಡಿ ಹೋಗಿದ್ದಾನೆ!' ಹೆಂಡತಿ ಮತ್ತೂ ರೇಗಿದಳು.

(ಸಂಗ್ರಹ) ಡಿ.ಎನ್. ಶ್ರೀನಾಥ್




ಕೇರಳದ ಮಾಂತ್ರಿಕ ಜ್ಯೋತಿಷ್ಯರು
ಕೇರಳದ ಕುಟ್ಟಿಚ್ಚಾತನ್ ಕುಳ್ಳಿಚೌಡಿ ದೈವಶಕ್ತಿಯಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 5 ದಿನದಲ್ಲಿ ಶಾಶ್ವತ ಪರಿಹಾರವಿದೆ.
ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:
ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)
ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.
ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು
ಜನಗಳ ಒತ್ತಾಯದ ಮೇರೆಗೆ ಪ್ರತಿ ತಿಂಗಳು ದಿ. 21 ರಿಂದ 23 ರವರೆಗೆ ಬೆಂಗಳೂರಿನಲ್ಲಿಯೂ ಲಭ್ಯವಿರುತ್ತಾರೆ.
ವಿ.ಸೂ.: ಸ್ತ್ರೀ–ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.